# ಪಾತ್ರದ ಮೇಲೆ ಪ್ರಯೋಗ ಮಾಡುವೆ

**ರಶ್ಮಿತಾ ಚೆಂಗಪ್ಪ**
**ಸ್ಟಾರ್ ಸುವರ್ಣದ 'ಕಾವೇರಿ ಕನ್ನಡ ಮೀಡಿಯಂ' ವೃಂದಾ**



◆ **ದಾಂಪತ್ಯ, ವೃತ್ತಿ ಬದುಕು ಹೇಗೆ ಸಾಗಿದೆ?**

ಮೊದಲು ನನಗೆ ಹೇಗೆ ಬೇಕೋ ಹಾಗೆ ಇದ್ದೆ. ಈಗಷ್ಟೇ ಮದುವೆ ಆಗಿದ್ದರಿಂದ ವೃತ್ತಿ ಬದುಕಿನ ದಿನಗಳನ್ನು ಲೆಕ್ಕಾಚಾರದ ಮೇಲೆ ಖರ್ಚು ಮಾಡಬೇಕಾಗುತ್ತದೆ. ಕೆಲಸದ ದಿನಗಳ ಶೆಡ್ಯೂಲ್ ಮಾಡಿಕೊಳ್ಳುತ್ತೇನೆ. ನನ್ನ ಪತಿ ಸೇರಿದಂತೆ ಅತ್ತೆ–ಮಾವ ನನ್ನ ಕೆಲಸವನ್ನು ಪ್ರೋತ್ಸಾಹಿಸುತ್ತಿದ್ದಾರೆ. ನನ್ನ ಅಮ್ಮನ ಮನೆಯಲ್ಲಿ ಸಿಗ್ತಾ ಇದ್ದ ಬೆಂಬಲವೇ ಅತ್ತೆ ಮನೆಯಲ್ಲೂ ಸಿಗುತ್ತಿದೆ. ದಾಂಪತ್ಯ ಕೆಲವು ದಿನಗಳಿಂದ ಆರಂಭವಾಗಿದ್ದು ಎಲ್ಲ ಚೆನ್ನಾಗಿದೆ.

◆ **ನೆಗೆಟಿವ್ ಪಾತ್ರಕ್ಕೆ ನೀವು ಬ್ರ್ಯಾಂಡ್ ಆಗಿದ್ದೀರಾ ಹೇಗೆ?**

ಹಾಗೆ ಅಂತ ಅಲ್ಲ. ಸುವರ್ಣದಲ್ಲೇ ನನ್ನ ವೃತ್ತಿ ಆರಂಭ ಆಯಿತು. ಆಗ 'ಮಹಾರಾಣಿ' ಆಗಿದ್ದೆ. ಅದು ಪಾಸಿಟಿವ್ ಪಾತ್ರವೇ ಆಗಿತ್ತು. ಅದರಲ್ಲಿ ಅಳುವ ಭಾವನಾತ್ಮಕ ಸನ್ನಿವೇಶ ಇರ್ತಿತ್ತು. ಇಂತಹ ಅನುಭವ ಇರುವಾಗಲೇ ನೆಗೆಟಿವ್ ಪಾತ್ರವೊಂದನ್ನು ಮಾಡಬೇಕು ಎಂದೆನಿಸಿತು. ಅದಾದ ಮೇಲೆ 'ಗಟ್ಟಿಮೇಳ' ಸೇರಿ ಮೂರು ಧಾರಾವಾಹಿಗಳಲ್ಲಿ ನೆಗೆಟಿವ್ ಪಾತ್ರಗಳನ್ನು ಮಾಡಿದೆ. ಅದೇ ಸಂದರ್ಭದಲ್ಲಿ ತಮಿಳಿನಲ್ಲೂ ಕೂಡ ಅಂತಹದ್ದೇ ಪಾತ್ರ ಮಾಡಿದ್ದೆ. ವೃತ್ತಿ ಬದುಕಿನಲ್ಲಿ ಅದು ಕ್ಲಿಕ್ ಆಯಿತು. ನಂತರ ತೀರ ನೆಗೆಟಿವ್ ಬೇಡ, ಒಳಿತು ಕೆಡುಕಿನ ಮಿಶ್ರಣದ ಮಧ್ಯಮ ಸ್ವಭಾವದ ಪಾತ್ರವನ್ನು ಮಾಡಬೇಕು ಎಂದು ಬಯಸಿದೆ. 'ಯಾರಿವಳು'ವಿನಲ್ಲಿ ಅಂತಹ ಪಾತ್ರ ಮಾಡಿದೆ. ಅದೂ ಒಳ್ಳೆಯ ಫಲಿತಾಂಶವನ್ನು ನೀಡಿತು. ನಂತರ ಒಂದು ಪಾಸಿಟಿವ್ ಮಾಡೋಣ ಎಂದು 'ಊರ್ಮಿಳಾ' ಮಾಡಿದೆ. ಅದೂ ಚೆನ್ನಾಗಿಯೇ ಆಯಿತು. ಮತ್ತೆ 'ಕಾವೇರಿ ಕನ್ನಡ ಮೀಡಿಯಂ'ನಲ್ಲಿ ವೃಂದಾ ನೆಗೆಟಿವ್ ಪಾತ್ರವೇ ಸಿಕ್ಕಿದೆ. ನಾನು ಪಾತ್ರಗಳಲ್ಲಿ ಪ್ರಯೋಗ ಮಾಡುತ್ತಿದ್ದೇನೆ. ವೀಕ್ಷಕರು ಕೂಡ ಅದನ್ನು ಒಪ್ಪುತ್ತಿದ್ದಾರೆ. ಪಾಸಿಟಿವ್ ಪಾತ್ರದಷ್ಟೇ ನೆಗೆಟಿವ್, ಗ್ರೇ ಪಾತ್ರಗಳಲ್ಲೂ ನನ್ನ ಅಭಿನಯವನ್ನು ಇಷ್ಟಪಟ್ಟಿದ್ದಾರೆ. ಈ ರೀತಿ ಬದಲಾವಣೆಯನ್ನು ಹೆಚ್ಚಿನ ಕಲಾವಿದರು ಮಾಡಿಲ್ಲ ಎಂದೆನಿಸುತ್ತದೆ.

◆ **ಕಾವೇರಿ ಎಂದ ತಕ್ಷಣ ನಿಮ್ಮಲ್ಲಿ ಉಂಟಾಗುವ ಭಾವನೆ ಮತ್ತು ಪಾತ್ರದ ನಿರ್ವಹಣೆ ಬಗ್ಗೆ ಹೇಳಬಹುದಾ?**

ಕಾವೇರಿ ನನ್ನ ತಾಯಿಯ ಹೆಸರು. ಹಾಗಾಗಿ ಅದು ಭಾವನಾತ್ಮಕ ಬಾಂಧವ್ಯದ ಬೆಸುಗೆಯನ್ನು ಸಹಜವಾಗಿ ಹುಟ್ಟಿಸುತ್ತದೆ. ಈ ಅವಕಾಶ ಬಂದ ತಕ್ಷಣ ಮತ್ತೊಂದು ಯೋಚನೆಯನ್ನೇ ಮಾಡದೆ ಒಪ್ಪಿಗೆಯನ್ನು ಸೂಚಿಸಿದೆ. ಆಗಷ್ಟೇ ಪಾಸಿಟಿವ್ ಪಾತ್ರವನ್ನೂ ಮಾಡುತ್ತಿದ್ದೆ. ಮತ್ತೆ ನೆಗೆಟಿವ್ ಪಾತ್ರ ಮಾಡಬೇಕು ಎಂದು ನನಗೂ ಅನ್ನಿಸಿತ್ತು. ಅದೇ ಸಮಯಕ್ಕೆ ಇದು ಸಿಕ್ಕಿದೆ. ಪಾತ್ರದ ಬಗ್ಗೆ ವಿವರವನ್ನು ಕೇಳಿದಾಗ ಅದರ ಹರವಿನಲ್ಲಿ ಏರಿಳಿತಗಳು ಹೆಚ್ಚಿವೆ ಎನ್ನುವುದು ಗೊತ್ತಾಯಿತು. ಇದರಲ್ಲಿ ಭಿನ್ನ ಸ್ವಭಾವವನ್ನು ಪ್ರಕಟಿಸಬೇಕಿದೆ. ಸದ್ಯ ಕಥೆ ಕೂಡ ಚೆನ್ನಾಗಿ ಹೋಗ್ತಿದೆ. ಮುಂದಿನ ದಿನಗಳಲ್ಲಿ ಇದಕ್ಕೆ ಯಾವ ಸ್ವರೂಪ ಸಿಗಲಿದೆಯೋ ಗೊತ್ತಿಲ್ಲ. ಒಟ್ಟಾರೆ ಕಥೆ ಮಾತ್ರ ಕುತೂಹಲವನ್ನು ಕಾದಿಟ್ಟುಕೊಂಡಿದೆ.

◆ **ಸಿನಿಮಾ ಮತ್ತು ಸೀರಿಯಲ್ ತಯಾರಿಕೆಯನ್ನು ನೋಡಿದರೆ ಈಗ ಹೇಗೆನಿಸುತ್ತದೆ?**

ಬೆಳ್ಳಿತೆರೆಯಲ್ಲಿ ಸ್ಪರ್ಧೆಯ ರೂಪದಂತೆ ಸಿನಿಮಾ ಮಾಡುತ್ತಿದ್ದಾರೆ ಎಂದೆನಿಸುತ್ತದೆ. ನಟ–ನಟಿಯರ ಬಳಿಗೆ ಯಾವುದೋ ಒಂದು ಪಾತ್ರ ಇಲ್ಲವೆ ಕಥೆ ಬಂದಾಗ ನಾನು ನಾಯಕ ಅಥವಾ ನಾಯಕಿ ಆಗಬೇಕು ಎನ್ನುವುದಕ್ಕಿಂತ ಕಥೆಯೇ ನಾಯಕ–ನಾಯಕಿ ಆಗಿರಬೇಕು ಎಂದು ಯೋಚಿಸುವುದು ಅಗತ್ಯ. ನಿರ್ದೇಶನ ಮತ್ತು ಅಭಿನಯಿಸುವ ನಟರ ಪ್ರಯತ್ನ ಹೆಚ್ಚಾಗಿದೆ. ಎಲ್ಲರೂ ನಿರ್ದೇಶನ ಮಾಡಲು ಸಾಧ್ಯ ಇಲ್ಲ, ಹಾಗೆಯೇ ನಟಿಸಲು ಕೂಡ. ನನ್ನ ಪ್ರಕಾರ ಯಾರಾದರೂ ನಟಿಸಬಹುದು ಎನ್ನುವ ಮನೋಭಾವದಿಂದ ಕಲೆಗೆ ಹಿನ್ನಡೆ ಆಗಬಹುದು. ಕಥೆ ಮತ್ತು ಕಲಾವಿದರ ಆಯ್ಕೆಯಲ್ಲಿ ಸಿದ್ಧ ಮಾದರಿಯನ್ನೇ ಅನುಸರಿಸಬಾರದು ಎನ್ನುವುದು ನನ್ನ ವೈಯಕ್ತಿಕ ಅನಿಸಿಕೆ. ನನಗೂ ಅನೇಕ ಸ್ಕ್ರಿಪ್ಟ್ ಬಂದಿವೆ. ಅಂತಹ ಕಥೆಗಳನ್ನು ನಾನು ಆಯ್ಕೆ ಮಾಡಿಕೊಳ್ಳುವುದಿಲ್ಲ.

ಸೀರಿಯಲ್‌ನಲ್ಲಿ ಕಥೆಯನ್ನು ಬೇಕಾದ ಹಾಗೆ ಬದಲಾವಣೆ ಮಾಡಿಕೊಳ್ಳಲು ಅವಕಾಶ ಇರುತ್ತದೆ. ಧಾರಾವಾಹಿ ವೀಕ್ಷಕರಿಗೆ ಇಷ್ಟ ಆಗಲಿಲ್ಲ ಎಂದು ಗೊತ್ತಾದರೆ, ಬೇರೆ ರೀತಿಯಲ್ಲಿ ಪ್ರಯೋಗವನ್ನು ಮಾಡಬಹುದು. ಇದು ಸೀರಿಯಲ್ ಮತ್ತು ಸಿನಿಮಾ ನಡುವೆ ಇರುವ ದೊಡ್ಡ ವ್ಯತ್ಯಾಸ. ಸಿನಿಮಾರಂಗಕ್ಕೆ ಪೈರಸಿ ದೊಡ್ಡ ತೊಂದರೆಯನ್ನು ಉಂಟುಮಾಡುತ್ತಿದೆ. ಕ್ಯಾಬ್, ಆಟೊದಲ್ಲಿ ನಾನು ಓಡಾಡುವಾಗ ಧಾರಾವಾಹಿಗಳ ಬಗ್ಗೆ ಸಾಮಾನ್ಯವಾಗಿ ಚಾಲಕರು ಚರ್ಚೆ ಮಾಡುತ್ತಾರೆ. ಅವರಿಗೆ ಹೊಸ ಸಿನಿಮಾಗಳ ಬಗ್ಗೆ ಅಷ್ಟು ಗೊತ್ತಿರುವುದಿಲ್ಲ. ಅದನ್ನು ನೋಡಿದಾಗ ಮಧ್ಯವಯಸ್ಕರ ಆಯ್ಕೆಯ ಸಿನಿಮಾಗಳು ಕಡಿಮೆ ಆಗಿವೆ ಎಂದು ಅನ್ನಿಸುತ್ತದೆ. ಒಂದು ವಾರ ಸಿನಿಮಾ ಓಡಿದರೆ ಅದನ್ನೇ ಸಂಭ್ರಮಿಸುವ ಪರಿಸ್ಥಿತಿ ಈಗಿದೆ.

◆ **ಪಾತ್ರವನ್ನು ಆಯ್ಕೆ ಮಾಡುವಾಗ ಕುಟುಂಬದ ಜೊತೆ ಚರ್ಚಿಸುತ್ತೀರಾ?**

ಖಾಸಗಿಯಾಗಿ ನಮ್ಮ ಕುಟುಂಬದಲ್ಲಿ ಚರ್ಚೆ ಮಾಡುತ್ತೇನೆ. ಅಂತಿಮ ನಿರ್ಧಾರ ನನ್ನದಾಗುತ್ತದೆ. ನಾನು ಕಥೆ ಮತ್ತು ಪಾತ್ರ ಎರಡನ್ನೂ ನೋಡುತ್ತೇನೆ. ನಮ್ಮ ಚರ್ಚೆಯಲ್ಲೂ ಭಿನ್ನ ಅಭಿಪ್ರಾಯ ಇರುತ್ತದೆ. ಪಾತ್ರದ ಮಹತ್ವಕ್ಕೆ ನಾನು ಆದ್ಯತೆ ನೀಡುತ್ತೇನೆ. ನೆಗೆಟಿವ್ ಪಾತ್ರ ಆಗಿದ್ದರೂ ಅದಕ್ಕೆ ಒಂದು ತೂಕ ಇರಬೇಕು. ಅಂತಹ ಮಹತ್ವ ಇಲ್ಲದ ಯಾವ ಪಾತ್ರವೂ ನನಗೆ ಇಷ್ಟ ಆಗಲ್ಲ. ಮೊದಲು ತಾಯಿ–ತಂದೆ, ತಮ್ಮ ನೆರವಿಗೆ ಬರುತ್ತಿದ್ದರು. ಈಗ ಆ ಪಡೆ ವಿಸ್ತಾರವಾಗಿದೆ. ಅತ್ತೆ–ಮಾವ ಪತಿ ಸಲಹೆ ನೀಡುತ್ತಾರೆ. ನಾವೆಲ್ಲ ಕುಳಿತು ಪಾತ್ರದ ಬಗ್ಗೆ ಚರ್ಚೆ ಮಾಡುವುದು ಒಂದು ರೀತಿಯಲ್ಲಿ ಅನುಕೂಲ.

■ **ರಾಘವೇಂದ್ರ ಕೆ.**